ಜಮಖಂಡಿ	ಮುಂಡರಗಿ	ರಾಯಭಾಗ	ಬ್ಯಾಡಗಿ
ಬೀಳಗಿ	ಬೆಟಗೇರಿ	ಅಥಣಿ	ಸವಣೂರು
ಗುಳೇದಗುಡ್ಡ	ಗಜೇಂದ್ರಗಡ	--	--

ಕರ್ನಾಟಕ ವಿಧಾನಸಭೆ

13. ಶ್ರೀ ಪಾಟೀಲ್ ಎ.ಎಸ್.

ಮಾನ್ಯ ಸಾರಿಗೆ ಸಚಿವರು.

ಅ) ಕರ್ನಾಟಕ ರಾಜ್ಯ ಸಾರಿಗೆ ನಿಗಮವು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಕಳೆದ ವರ್ಷ ವರ್ಗಾವಣೆ 10,000 ರೂ.ಗಳು ತೆಗೆದುಕೊಂಡಿದ್ದು ನಿಜವೇ;

ಹೌದು.

ಆ) ಅಂತಹ ಎಷ್ಟು ಅರ್ಜಿಗಳು ಇಲ್ಲಿಯವರೆಗೆ ಬಂದಿವೆ; ಅದರಿಂದ ಎಷ್ಟು ಹಣ ಸಂಗ್ರಹವಾಗಿದೆ; ಈ ಹಣ ಯಾವ ಕೆಲಸಕ್ಕಾಗಿ ಉಪಯೋಗಿಸಲಾಗುತ್ತಿದೆ;

ಸಂಸ್ಥೆಗಳು	ಅರ್ಜಿಗಳ ಸಂಖ್ಯೆ	ಹಣಸಂಗ್ರಹ (ರೂ. ಗಳಲ್ಲಿ)	ಉಪಯೋಗ
KSRTC	631	63,10,000	ಕಾರ್ಮಿಕಕಲ್ಯಾಣ ಚಟುವಟಿಕೆಗಳಿಗಾಗಿ
BMTC	1080(ಇವುಗಳಲ್ಲಿ 544 ಅರ್ಜಿಗಳನ್ನು ಮಾತ್ರ ಪರಿಗಣಿಸಿದೆ ಉಳಿದ ಅರ್ಜಿದಾರರಿಗೆ ಅವರ ಹಣ ಹಿಂದಿರುಗಿಸಲಾಗಿದೆ)	58,35,000 (ಖಾಯಂ ನೌಕರರಿಂದ 15,000, ಪರೀಕ್ಷಾರ್ಥಿ/ತರಬೇತಿ ನೌಕರರಿಂದ 10,000)	-do-
NWKRTC	188	18,80,000	-do-
NEKRTC	218	21,80,000	-do-

ಇ) ಹಣ ತುಂಬಿ ವರ್ಗಾವಣೆಗೆ ಬಂದ ಅರ್ಜಿಗಳ ಎಲ್ಲಾ ನೌಕರರಿಗೆ ವರ್ಗಾವಣೆ ಮಾಡಲಾಗಿದೆಯೇ;

ಇಲ್ಲ.

ಈ) ಅರ್ಜಿ ನೀಡಿದರೂ ವರ್ಗಾವಣೆಯಾಗದ ನೌಕರರೆಷ್ಟು; ವರ್ಗಾವಣೆ ಮಾಡದಿದ್ದಲ್ಲಿ ಅವರ ಹಣ ಮರಳಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು;

KSRTC	143
BMTC	536 ವರ್ಗಾವಣೆ ಅರ್ಜಿಗಳನ್ನು ಪರಿಗಣಿಸಿರುವುದಿಲ್ಲ. ಹಣವನ್ನು ಪಾವತಿಸಿಕೊಂಡಿಲ್ಲ.
NWKRTC	14 ನೌಕರರ ವರ್ಗಾವಣೆ ಆದೇಶವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬಂದಿರುವುದಿಲ್ಲ. ವರ್ಗಾವಣೆ ಕೋರಿಕೆಯನ್ನು ಪರಿಗಣಿಸದಿರುವಂತೆ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ಹಣವನ್ನು ಮರಳಿ ನೀಡಲಾಗುವುದು.
NEKRTC	25 ವರ್ಗಾವಣೆಗಳನ್ನು ಪರಿಗಣಿಸಿರುವುದಿಲ್ಲ. ಹಣ ಹಿಂದಿರುಗಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

ಊ) ಹಣತೆಗೆದುಕೊಂಡು ವರ್ಗಾವಣೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿ ಇದೆಯೇ?

KSRTC	ಜಾರಿಯಲ್ಲಿದೆ.
BMTC	ಜಾರಿಯಲ್ಲದೆ.
NWKRTC	ಜಾರಿಯಲ್ಲಿದೆ.
NEKRTC	ಜಾರಿಯಲ್ಲಿದೆ.

ಸಾರಿಇ 42 ಸಾಸಂಪ್ರ 2009

(ಆರ್.ಅಶೋಕ)
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

14. ಶ್ರೀ ಪಾಟೀಲ್ ಎ.ಎಸ್.
ಮಾನ್ಯ ಸಾರಿಗೆ ಸಚಿವರು.

ಅ) ರಾಜ್ಯದಲ್ಲಿರುವ ಸರಕಾರಿ ಸ್ವಾಮ್ಯದ 4 ಸಂಸ್ಥೆಗಳ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ ಕ್ಷೇತ್ರದ ಕೇಂದ್ರ ಸ್ಥಾನವಾದ ದೇವರ ಹಿಪ್ಪರಗಿ ಮತ್ತು ಹೂವಿನ ಹಿಪ್ಪರಗಿ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆಯೇ:

ದೇವರ ಹಿಪ್ಪರಗಿ ಬಸ್‌ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು ರೂ.30.00ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮಂಜೂರಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಹೂವಿನ ಹಿಪ್ಪರಗಿ ಬಸ್ ನಿಲ್ದಾಣವನ್ನು ಡಾಂಬರೀಕರಣಗೊಳಿಸಲು ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಆದರೆ ಬಸ್ ನಿಲ್ದಾಣದ ನಿವೇಶನ ಕುರಿತಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಅಭಿವೃದ್ಧಿ ಪಡಿಸಲು ಸಾಧ್ಯವಾಗಿಲ್ಲ.